C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.80/2022 ಸಿ. ಡಬ್ಲ್ಯೂ-10 ಪಿ. ಡಬ್ಲ್ಯೂ-7

ದಿನಾಂಕಃ- 23.06.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ರೇವಣ್ಣ |
| ತಂದೆಯ ಹೆಸರು | ನಂಜಯ್ಯ |
| ವಯಸ್ಸು | 64 ವರ್ಷ |
| ಉದ್ಯೋಗ | ನಿವೃತ್ತ ಎ ಎಸ್ ಐ |
| ವಾಸ | ನಾಗಮಂಗಲ ನಗರ. |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 2016 ರಿಂದ 2021 ರವರೆಗೆ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಕೆಲಸ ಮಾಡಿದ್ದೇನೆ.

2. ನಾನು ದಿಃ 02.05.2019 ರಂದು 13.00 ಗಂಟೆ ಸುಮಾರಿಗೆ ಠಾಣಾ ಚಾರ್ಜಿನಲ್ಲಿದ್ದಾಗ ಹೇಮಲತಾ ಎನ್ನುವವರು ಠಾಣೆಗೆ ಬಂದು ನನ್ನ ಕೈಗೆ ನಿಪಿ-1 ರಲ್ಲಿ ಗುರುತಿಸಿರುವ ದೂರನ್ನು ಕೊಟ್ಟಿದ್ದಾರೆ. ನಾನು ಹೇಮಲತಾ ರವರು ಕೊಟ್ಟ ದೂರಿನ ಆಧಾರದ ಮೇಲೆ ಅಶೋಕ ಕುಮಾರ, ಗಿರಿಜಾ ಮತ್ತು ಸೃಜನಾ ರವರ ವಿರುದ್ಧ IPC ಕಲಂ 341, 504, 323, 354, 307, 506 ಸಹ ಕಲಂ 34 ರನ್ವಯ ದಂಡಿಸಲ್ಪಡುವ ಅಪರಾಧಗಳಿಗೆ ಠಾಣಾ ಮೊಕದ್ದಮೆ ನಂ. 26/2019 ನೇ ದನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮುಖ್ಯ ಪೇದೆ ನಂಬರು-11 ರವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ.

3. ನಾನು ದಿಃ 02.05.2019 ರಂದು ಮಧ್ಯಾಹ್ನ 3.00 ಗಂಟೆಗೆ ಘಟನೆ ನಡೆದಿದೆ ಎನ್ನುವ ಸ್ಥಳಕ್ಕೆ ಹೋಗಿ ಪಂಚರಾದ ಹರೀಶ ಮತ್ತು ಪವನ್ ರವರ ಸಮಕ್ಷಮ ಹೇಮಲತಾ ರವರು ತೋರಿಸಿದ ಸ್ಥಳವನ್ನು ಪರಿಶೀಲನೆ ಮಾಡಿ ಹೇಮಲತಾ ರವರು ತೋರಿಸಿದ ಒಂದು ಮಚ್ಚು, ಒಂದು ಸೀರೆ, ಒಂದು ರಕ್ತದ ಕಲೆಯಾಗಿರುವ ಹರಿದ ರವಿಕೆಯನ್ನು ಮಹಜರು ತಯಾರಿಸಿ ವಶಪಡಿಸಿಕೊಂಡಿದ್ದೇನೆ.

4. ನಾನು ಮಚ್ಚು, ಸೀರೆ ಮತ್ತು ರವಿಕೆಯನ್ನು ವಶಪಡಿಸಿಕೊಳ್ಳುವಾಗ ಪ್ರತ್ಯೇಕವಾಗಿ ಬಟ್ಟೆಯ ಚೀಲಗಳಲ್ಲಿ ತುಂಬಿ ಮೊಹರು ಮಾಡಿದ್ದೇನೆ.

5. ಸ್ಥಳದಲ್ಲಿ ತಯಾರಿಸಿದ ಮಹಜರಿನ ಮೇಲೆ ನಾನು ಸಹಿ ಮಾಡಿದ್ದೇನೆ ಮತ್ತು ಪಂಚರಾದ ಹರೀಶ ಮತ್ತು ಪವನ್ ಹಾಗೂ ಹೇಮಾವತಿ ರವರ ಸಹಿ ಮಾಡಿಸಿದ್ದೇನೆ.

6. ಮೇಲೆ ಹೇಳಿದ ವಸ್ತುಗಳನ್ನು ವಶಪಡಿಸಿಕೊಂಡ ವಿಚಾರವನ್ನು ಠಾಣಾ ಪಿ ಎಫ್ 19/2019 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಕಳುಹಿಸಿದ್ದೇನೆ.

7. ನಾನು ದಿಃ 02.05.2019 ರಂದು ಫಿರ್ಯಾದಿ ಹೇಮಲತಾ ರವರ ಮರು ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ. ಘಟನೆ ನಡೆದ ಸ್ಥಳದಲ್ಲಿ ಸೃಜನಾ ಇರಲಿಲ್ಲ ಎಂದು ಮತ್ತು ಗಾಯಾಳು ಜಯಲಕ್ಷ್ಮ್ಮ ರವರನ್ನು ಬೆಂಗಳೂರಿನ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದ ವಿಚಾರವಾಗಿ ಹೇಮಲತಾ ದಿಃ 02.05.2019 ರಂದು ಹೆಚ್ಚುವರಿ ಹೇಳಿಕೆಯನ್ನು ಕೊಟ್ಟಿದ್ದಾರೆ.

8. ನಾನು ದಿಃ 03.09.2019 ರಂದು ಸಾಕ್ಷಿದಾರರಾದ ರಂಗನಾಥ, ಶಂಕರೇಗೌಡ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ.

9. ಕೃತ್ಯ ನಡೆದಿದ್ದ ಸ್ಥಳದಲ್ಲಿ ಮಹಜರು ತಯಾರಿಸುವಾಗ ಮತ್ತು ವಸ್ತುಗಳನ್ನು ವಶಪಡಿಸಿಕೊಳ್ಳುವಾಗ ನಿಪಿ.13 ರಲ್ಲಿ ಗುರುತಿಸಿರುವ ಫೋಟೋಗಳನ್ನು ತೆಗೆಸಿದ್ದೇನೆ.

10. ಎಂಒ-1 ರಿಂದ 3 ಎಂದದು ಗುರುತಿಸಿರುವ ಮಚ್ಚು, ಸೀರೆ ಮತ್ತು ರವಿಕೆಗಳನ್ನು ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿದಾಗ ವಶಪಡಿಸಿಕೊಂಡಿದ್ದೇನೆ.

11. ಆನಂತರ ಈ ಪ್ರಕರಣದ ಕಡತವನ್ನು ಮುಂದುವರೆದ ತನಿಖೆಗಾಗಿ ಚಾಸಾ-11 ನೇ ಪಿ ಎಸ್ ಐ ರವರಿಗೆ ಕೊಟ್ಟಿದ್ದೇನೆ.

12. ಈ ಸಾಕ್ಷಿ ಕಡತದಲ್ಲಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುವುದಾಗಿ ಮತ್ತು ಪ್ರಥಮ ವರ್ತಮಾನ ವರದಿಯ ಮೇಲೆ ತನ್ನ ಸಹಿ ಇರುವುದಾಗಿ ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನಿಪಿ.14 ಎಂದು ಮತ್ತು ಈ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

13. ಈ ಸಾಕ್ಷಿ ನಿಪಿ-1 ಮತ್ತು ನಿಪಿ-2 ರಲ್ಲಿ ಗುರುತಿಸಿರುವ ದೂರು ಮತ್ತು ಮಹಜರಿನ ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಸದರಿ ಸಹಿಗಳನ್ನು ಕ್ರಮವಾಗಿ ನಿಪಿ.1(ಬಿ) ಮತ್ತು ನಿಪಿ.2(ಸಿ) ಎಂದು ಗುರುತಿಸಲಾಯಿತು.

14. ನನ್ನ ಸಮಕ್ಷಮ ದಿಃ 03.05.2019 ರಂದು ಶಂಕರೇಗೌಡ ರವರು ನಿಪಿ.12 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿದ್ದಾರೆ.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಪಾಪಣ್ಣ ವಕೀಲರಿಂದಃ-</u>

1. ಬಿಂಡಿಗನವಿಲೆ ಪೊಲೀಸ್ ಠಾಣೆಯಿಂದ ಸುಮಾರು 25 ಕಿಮಿ ದೂರದಲ್ಲಿ ಆದಿಚುಂಚನಗಿರಿ ಆಸ್ಪತ್ರೆ ಇದೆ. ಬಿಂಡಿಗನವಿಲೆ ಪೊಲೀಸ್ ಠಾಣೆಯಿಂದ ಸುಮಾರು 16 ಕಿಮಿ ದೂರದಲ್ಲಿ ಸಿ. ಬಂಗಲಿ ಗ್ರಾಮ ಇದೆ.

2. ಜಯಲಕ್ಷ್ಮಮ್ಮ ಗಾಯಗಳಿಗೆ ಚಿಕಿತ್ಸೆ ಪಡೆಯಲು ಬಂದಿದ್ದಾರೆಂದು ದಿಃ 30.04.2019 ರಂದು ಅಥವಾ 01.05.2019 ರಂದು ಆದಿಚುಂಚನಗಿರಿ ಆಸ್ಪತ್ರೆಯಿಂದ ನಮ್ಮ ಪೊಲೀಸ್ ಠಾಣೆಗೆ ಯಾವುದೇ ರೀತಿಯ ಸುದ್ದಿ ಬಂದಿಲ್ಲ.

3. ದಿಃ 02.05.2019 ಮಧ್ಯಾಹ್ನ 1.00 ಗಂಟೆಗಿಂತ ಮುಂಚೆ ಹೇಮಲತಾ ರವರು ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಇದ್ದರೇ ಅಥವಾ ಇಲ್ಲವೇ ಎನ್ನುವ ಕುರಿತು ಆಸ್ಪತ್ರೆಯಿಂದ ನಮ್ಮ ಬಿಂಡಿಗನವಿಲೆ ಪೊಲೀಸ್ ಠಾಣೆಗೆ ಯಾವುದೇ ರೀತಿಯ ಮಾಹಿತಿ ಬಂದಿಲ್ಲ.

4. ನಿಪಿ-1 ರಲ್ಲಿ ಗುರುತಿಸಿರುವ ದೂರನ್ನು ಬಿಂಡಿಗನವಿಲೆ ಠಾಣೆಯಲ್ಲಿ ತಯಾರಿಸಲಾಗಿದೆ ಎನ್ನುವುದು ಸರಿಯಲ್ಲ. ಹೇಮಲತಾ ರವರು ನಿಪಿ-1 ರಲ್ಲಿ ಗುರುತಿಸಿರುವ ದೂರನ್ನು ಠಾಣೆಯಲ್ಲಿ ನನ್ನ ಕೈಗೆ ಕೊಟ್ಟಿದ್ದಾರೆ ಎನ್ನುವ ಸಮಯದಲ್ಲಿ ಎಂಒ-1 ರಿಂದ ಎಂಒ-3 ರವರೆಗೆ ಗುರುತಿಸಿರುವ ಬಟ್ಟೆಗಳನ್ನು ಮತ್ತು ಮಚ್ಚನ್ನು ನನ್ನ ಕೈಗೆ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ.

5. ನಾನು ಬಿಂಡಿಗನವಿಲೆ ಠಾಣೆಯಲ್ಲಿ ನಿಪಿ-2 ರಲ್ಲಿ ಗುರುತಿಸಿರುವ ಮಹಜರನ್ನು ತಯಾರಿಸಿದ್ದೇನೆ ಮತ್ತು ವಹಜರಿನ ಮೇಲೆ ಹೇಮಲತಾ, ಪವನ್ ಮತ್ತು ಹರೀಶ ರವರ ಸಹಿ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

6. ನಾನು ಪೊಲೀಸ್ ಠಾಣೆಯಲ್ಲಿ ಪ್ರಕರಣಕ್ಕೆ ಅನುಕೂಲವಾಗುವಂತೆ ಮಹಜರು ಮತ್ತು ದೂರನ್ನು ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ.13 ರಲ್ಲಿ ಗುರುತಿಸಿರುವ ಫೋಟೋಗಳನ್ನು ಫೋಟೋಗ್ರಾಫರ್ ಮೂಲಕ ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ.

7. ನಾನಾಗಲೀ, ಹೇಮಲತಾ ರವರಾಗಲೀ, ದಿಃ 02.05.2019 ರಂದು ಅಥವಾ ನಂತರ ಸಿ.ಬಂಗಲಿ ಗ್ರಾಮಕ್ಕೆ ಹೋಗಿಲ್ಲ ಎನ್ನುವುದು ಸರಿಯಲ್ಲ.

8. ರಂಗನಾಥ ರವರು ಜಯಲಕ್ಷ್ಮಮ್ಮ ರವರ ಸಹೋದರ ಎನ್ನುವುದು ನಿಜ. ಯಾವುದೇ ಕಾಲದಲ್ಲಿ ರಂಗನಾಥ, ಬಿಂಡಿಗನವಿಲೆ ಠಾಣೆಗೆ ಬಂದಿಲ್ಲ ಎನ್ನುವುದು ನಿಜ. ನನ್ನ ಸವಕ್ಷಮ ರಂಗನಾಥ ಮತ್ತು ಶಂಕರೇಗೌಡ ಯಾವುದೇ ರೀತಿಯ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

9. ಹೇಮಲತಾ ರವರ ಮುಂದುವರೆದ ಹೇಳಿಕೆ ಎನ್ನುವ ದಾಖಲೆಯನ್ನು ನಾನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಹೇಮಲತಾ ರವರು ಮುಂದುವರೆದ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

10. ತನಿಖೆ ಕಾಲದಲ್ಲಿ 1 ನೇ ಆರೋಪಿ ಅಶೋಕ ಕುಮಾರ ಮತ್ತು ಜಯಲಕ್ಷ್ಮಮ್ಮ ರವರ ನಡುವೆ ಸಿವಿಲ್ ಕೇಸು ವಿಚಾರಣೆಗೆ ಇದ್ದುದರ ಬಗ್ಗೆ ನನಗೆ ತಿಳಿಯಿತು ಎನ್ನುವುದು ಸರಿಯಲ್ಲ. ತನಿಖೆ ಕಾಲದಲ್ಲಿ ನಾಗಮಂಗಲ ನ್ಯಾಯಾಲಯದಲ್ಲಿ 1 ನೇ ಆರೋಪಿ ಅಶೋಕ ಕುಮಾರ ಮತ್ತು ಜಯಲಕ್ಷ್ಮಮ್ಮ ರವರ ನಡುವೆ ಕ್ರಿಮಿನಲ್ ಕೇಸುಗಳು ವಿಚಾರಣೆಗೆ ಇದ್ದುದರ ಬಗ್ಗೆ ನನಗೆ ತಿಳಿದಿತ್ತು ಎನ್ನುವುದು ನಿಜ.

11. ತನಿಖೆ ಸಮಯದಲ್ಲಿ ನನಗೆ ಜಯಲಕ್ಷ್ಮಮ್ಮ ರವರ ಮೇಲೆ ಬೇರೆ ವ್ಯಕ್ತಿಗಳಿಂದ ಹಲ್ಲೆಯಾಗಿದೆ ಎಂದು ತಿಳಿಯಿತು ಎನ್ನುವುದು ಸರಿಯಲ್ಲ. ನನಗೆ ತನಿಖೆ ಕಾಲದಲ್ಲಿ ಈ ಪ್ರಕರಣದ ಆರೋಪಿತರಾದ ಅಶೋಕ ಕುಮಾರ ಮತ್ತು ಗಿರಿಜಾ ರವರುಗಳು ಜಯಲಕ್ಷ್ಮಮ್ಮ ರವರ ಮೇಲೆ ಹಲ್ಲೆ ಮಾಡಿಲ್ಲ ಎನ್ನುವುದು ತಿಳಿಯಿತು ಎನ್ನುವುದು ಸರಿಯಲ್ಲ.

12. ಬೇರೆಯವರು ಹಲ್ಲೆ ಮಾಡಿದ್ದರಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜಯಲಕ್ಷ್ಮಮ್ಮ ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಮತ್ತು ಈಗ ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

13. ನನ್ನ ಸಮಕ್ಷಮ ದಿಃ 03.05.2019 ರಂದು ಶಂಕರೇಗೌಡ ರವರು ನಿಪಿ.12 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

14. ಜಯಲಕ್ಷ್ಮಮ್ಮನಿಗೆ 1 ನೇ ಆರೋಪಿ ಅಶೋಕ ಕುಮಾರ ಮೈದುನ ಆಗಬೇಕು ಎನ್ನುವುದು ನಿಜ.

ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.